ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/89/2015-16. ದಿನಾಂಕ:23-08-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಬಿ.ಸೌಬಾಗ್ಯ ಗಂಡ ಪ್ರಶಾಂತಕುಮಾರ ಕೆ.ಸಿ.<br>ಮಾತೃಶ್ರೀ. ನಿಲಯ ಪಿ.ಡಬ್ಲೂಡಿ.ಆಫೀಸ್<br>ಹಿಂಬಾಗ ಚನ್ನಗಿರಿ ಪಟ್ಟಣ (ತಾ)<br>ದಾವಣಗೆರೆ ಜಿಲ್ಲಾ<br>2)ಟಿ.ಕೊಟ್ರೇಶಿ ತಂದೆ ಲೇಟ್ ಮಲ್ಲಪ್ಪ<br>ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |
| ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 64/1. ವಿಸ್ತೀರ್ಣ 4-00. ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 64/1. ವಿಸ್ತೀರ್ಣ 4-00. ಎಕ್ರೆ ಜಮೀನನ್ನು ಸದರಿ ತಾಲೂಕು ಕೊಟ್ಟೂರು ಪಟ್ಟಣದ ಟಿ.ಕೊಟ್ರೇಶಿ ತಂದೆ ಲೇಟ್ ಮಲ್ಲಪ್ಪ ಇವರಿಂದ ದಾವಣಗೆರೆ ಜಿಲ್ಲಾ ಚನ್ನಗಿರಿ ಪಟ್ಟಣದ ಬಿ. ಸೌಬಾಗ್ಯ ಗಂಡ ಪ್ರಶಾಂತಕುಮಾರ ಕೆ.ಸಿ.ಇವರು ದಿನಾಂಕ 29-09-2015 ರ ಡಾಕ್ಯುಮೆಂಟ್ ನಂಬರ್: 2056/2015-16. ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಜೋಳದಕೂಡ್ಲಿಗಿ ಇವರು ನಮೂನೆ-21 ನೋಟಿಸನ್ನು ದಿನಾಂಕ 3-10-2015. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಈ ಪ್ರಕರಣವನ್ನು ಎಂ.ಆರ್.ನಂಬರ್: 25/2015-16. ದಿನಾಂಕ 04-11-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 09-03-2016 ರಿಂದ 23-08-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ.01 ನೇ ಅರ್ಜಿದಾರರು ಜೋಳದಕೂಡ್ಲಿಗಿ ಗ್ರಾಮದ ಸನಂ 64/1. ವಿಸ್ತೀರ್ಣ 4-00. ಎಕ್ರೆ ಜಮೀನನ್ನು ಕೊಟ್ಟೂರು ಪಟ್ಟಣದ ಟಿ.ಕೊಟ್ರೇಶಿ ತಂದೆ ಲೇಟ್ ಮಲ್ಲಪ್ಪ ಇವರಿಂದ ದಿನಾಂಕ 29-09-2015 ರ ಡಾಕ್ಯುಮೆಂಟ್ ನಂಬರ್: 2056/2015-16. ರ ಪ್ರಕಾರ ರೂ: 4.00.000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ಎರಡನೇ ವಾದಿಯ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಎರಡನೇ ವಾದಿಯ ಅಜ್ಜಿಯವರ ತಂದೆಯಾದ ಮಲ್ಲಪ್ಪನ ತಾಯಿ ಜಂಬವ್ವ ಗಂಡ ಕಾಳಪ್ಪ ಇವರು ಜೀವಿತಾಕಾಲದಲ್ಲಿ ಅಂದರೆ ದಿನಾಂಕ 03-02-1961 ರಂದು ಹುಣಸಿಕಟ್ಟೆ ಗ್ರಾಮದ ಮೂಕಪ್ಪನ ಮಕ್ಕಳಾದ ಸಣ್ಣಕೆಂಚಪ್ಪ, ಕೊಟ್ರಪ್ಪ ಇವರಿಂದ ಖರೀದಿಸಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಅಂದಿನಿಂದ ಇಲ್ಲಿಯವರೆಗೂ ಎರಡನೇ ವಾದಿಯ ಸ್ವಾದೀನ ಅನುಭವದಲ್ಲಿರುತ್ತದೆ. ಎರಡನೇ ವಾದಿಯು 01 ನೇ ವಾದಿಗೆ ಶುದ್ದ ಕ್ರಯಕ್ಕೆ ನೊಂದಣಿ ಮಾಡಿಸಿ ಕೊಟ್ಟಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ನಮೂನೆ-21ನ್ನು ಪರಿಶೀಲಿಸಲಾಗಿ ಯಾವುದೇ ಆಕ್ಷೇಪಣೆಗಳು ಸ್ವೀಕೃತಿಯಾಗಿಲ್ಲವೆಂದು ಗ್ರಾಮಲೆಕ್ಕಿಗರು ನಮೂದಿಸಿದ್ದು ಕಂದಾಯ ಪರಿವೀಕ್ಷಕರು ನಿಗದಿತ ಅವಧಿಯೊಳಗೆ ಆಕ್ಷೇಪಣೆಯು ಬಂದಿದೇಯೇಂಬ ಬಗ್ಗೆ ನಮೂನೆಗೆ ಹೌದು ಎಂದು ನಮೂದಿಸಿರುವುದರಿಂದ ಈ ಪ್ರಕರಣವು ವಿಚಾರಣೆಗೆ ಬಂದಿದೆ ಯಾರಿಂದ ಆಕ್ಷೇಪಣೆ ಸ್ವೀಕೃತಿಯಾಗಿದಯೇಂಬ ಬಗ್ಗೆ ಕಂದಾಯ ಪರಿವೀಕ್ಷಕರು ಎಲ್ಲಿಯೂ ಉಲ್ಲೇಖಿಸಿಲ್ಲ ಕಾರಣ ಕಂದಾಯ ಪರಿವೀಕ್ಷಕರ ತಕರಾರನ್ನು ತಳ್ಳಿಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 64/1. ವಿಸ್ತೀರ್ಣ 4-00. ಎಕ್ರೆ ಜಮೀನನ್ನು ದಿನಾಂಕ 29-09-2015 ರ ಡಾಕ್ಯುಮೆಂಟ್ ನಂಬರ್: 2056/2015-16 ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಬಿ.ಸೌಬಾಗ್ಯ ಗಂಡ ಪ್ರಶಾಂತಕುಮಾರ ಕೆ.ಸಿ. ಚನ್ನಗಿರಿ ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 23-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಬಿ.ಸೌಬಾಗ್ಯ ಗಂಡ ಪ್ರಶಾಂತಕುಮಾರ ಕೆ.ಸಿ. ಮಾತೃಶ್ರೀ ನಿಲಯ ಪಿ.ಡಬ್ಲ್ಯೂ.ಡಿ. ಚನ್ನಗಿರಿ ಪಟ್ಟಣ ದಾವಣಗೆರೆ ಜಿಲ್ಲಾ. ಟಿ.ಕೊಟ್ರೇಶ ತಂದೆ ಲೇಟ್ ಮಲ್ಲಪ್ಪ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಕೆ.ಎಸ್.ನಾಗರಾಜ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.